CFC.R.P.67 ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಪ್ಪಳ

**S.C No.: 25/2017**

Form No.4(Civil)
(R.P.No.57)

ಪಿ.ಡಬ್ಲ್ಯೂ ನಂಃ 4
ಸಿ.ಡಬ್ಲ್ಯೂ ನಂಃ 8
ಸಾಕ್ಷಿಯನ್ನು ದಿನಾಂಕಃ 20-07-2023
ರಂದು ಪ್ರತಿಜ್ಞೆ ಮಾಡಿಸಲಾಯಿತು

| | | |
|---|---|---|
| ಸಾಕ್ಷಿದಾರನ ಹೆಸರು | ಃ | ಸಂಗಪ್ಪ |
| ತಂದೆಯ ಹೆಸರು | ಃ | ಶೇಷಪ್ಪ ಭಾವಿಕಟ್ಟಿ |
| ವಯಸ್ಸು | ಃ | 55 ವರ್ಷ |
| ಉದ್ಯೋಗ | ಃ | ಒಕ್ಕಲುತನ |
| ವಾಸ ಸ್ಥಳ | ಃ | ವಣಗೇರಿ |

ಸಾಕ್ಷಿಯ ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರವರಿಂದ

ಈ ಪ್ರಕರಣಕ್ಕೆ ಸಂಬಂಧಿಸಿದ ಮೃತ ಮಂಜುಳಾ ಮತ್ತು ಆಕೆಯ ಗಂಡ ಪ್ರಾಸಾ 3 ಸಂಗಪ್ಪ ಕೊಂಡಿಕಾರ ನನಗೆ ಗೊತ್ತು. ದಿಃ 17-3-2016 ರಂದು ನಾನು ನಮ್ಮ ಊರಿನಲ್ಲಿದ್ದಾಗ ಕನಕಪ್ಪ ಹಳ್ಳದಮಾಳಿ ಎನ್ನುವವನು ನನಗೆ ಫೋನು ಮಾಡಿ ಕುರುಬನಾಳದ ಗುಡ್ಡದ ಹತ್ತಿರ ಮಂಜುಳಾಳ ಸುಟ್ಟ ಶವ ಬಿದ್ದಿದೆ ಅಂತಾ ತಿಳಿಸಿದನು. ಆಗ ಅದನ್ನು ತಿಳಿದುಕೊಳ್ಳುವ ಸಲುವಾಗಿ ನಾನು, ಶಂಕ್ರಪ್ಪ ಚೌಡ್ಕಿ, ಕನಕಪ್ಪ ರಾಣಿ, ಆಕೆಯ ಗಂಡ ಸಂಗಪ್ಪ ಎಲ್ಲರೂ ಕೂಡಿ ಕೃತ್ಯ ನಡೆದ ಸ್ಥಳಕ್ಕೆ ಹೋದೆವು. ದಿಃ 16-3-2016 ರ ರಾತ್ರಿ 7 ರಿಂದ ಮತ್ತು ದಿಃ 17-3-2016 ರ ಬೆಳಗಿನ 7 ರ ಮಧ್ಯ ಮಂಜುಳಾಳಿಗೆ ಸುಟ್ಟು ಹಾಕಿರಬಹುದೆಂದು ಗೊತ್ತಾಯಿತು. ಸುಟ್ಟ ಶವದ ಹತ್ತಿರ ಚಾಪೆ ಬಿದ್ದಿತ್ತು ಮತ್ತು ಅಲ್ಲಿಯೇ ಅವಳ ಚಪ್ಪಲಗಳು ಬಿದ್ದಿದ್ದವು, ಶಿವಪ್ಪ ಕೋಡಿಹಾಳನ 1 ಫೋಟೋ ಇತ್ತು ಮತ್ತು ಅಲ್ಲಿ ಮಂಜುಳಾಳ 4 ಫೋಟೋಗಳು ಅಲ್ಲಿ ಬಿದ್ದಿದ್ದವು.

ದಿಃ 19-4-2016 ರಂದು ಪೊಲೀಸರು ನನ್ನನ್ನುಕುಷ್ಟಗಿ ಪೊಲೀಸ ಠಾಣೆಗೆ ಕರೆದಿದ್ದರು. ಮಂಜುಳಾಗೆ 1 ನೇ ಆರೋಪಿಯ ರೂಮಿನಲ್ಲಿ ಕೊಲ್ಡ್ರಿಂಕ್ಸನಲ್ಲಿ ನಿದ್ದೆ ಗುಳಿಗೆ ಹಾಕಿ ಪ್ರಜ್ಞೆ ತಪ್ಪಿಸಿ ಕುತ್ತಿಗೆಗೆ ಟವೆಲ್ಲನ್ನು ಬಿಗಿದು ನಂತರ 1 ಮತ್ತು 2 ನೇ ಆರೋಪಿತರು ಸೇರಿ ಅರೆಪ್ರಜ್ಞಳಾಗಿದ್ದ ಅವಳನ್ನು ಕೃತ್ಯ ನಡೆದ ಸ್ಥಳಕ್ಕೆ ತೆಗೆದುಕೊಂಡು ಹೋಗಿ ಅಲ್ಲಿ ಸುಟ್ಟು ಹಾಕಿದ್ದಾರೆ ಅಂತಾ ಪೊಲೀಸರಿಂದ ತಿಳಿಯಿತು. 1 ನೇ ಆರೋಪಿ ಮಂಜುಳಾಗೆ ಸುಟ್ಟು ಹಾಕಿದರೆ ಅವಳ ಸ್ಥಳದಲ್ಲಿ ತನ್ನನ್ನು ಆಶಾಕಾರ್ಯಕರ್ತೆಯಾಗಿ ನೇಮಿಸಿಕೊಳ್ಳುವುದು ಸಾಧ್ಯವಾಗುತ್ತದೆ ಅಂತಾ ತಿಳಿದುಕೊಂಡು ಹಾಗೇ ಅವಳು ಆಕೆಯ ಕೊಲೆ ಮಾಡಿದ್ದಾಳೆ ಅಂತಾ ಅನಿಸುತ್ತದೆ.

1ನೇ ಆರೋಪಿ ಒಂದು ಬಾರಿ ಆಶಾಕಾರ್ಯಕರ್ತೆ ಹುದ್ದೆಗೂ ಕೂಡಾ ಪ್ರಯತ್ನಿಸಿದ್ದಾಳೆ ಎನ್ನುವುದು ಕೂಡಾ ನನಗೆ ಆಕೆಯ ಗಂಡನಿಂದ ಗೊತ್ತಾಗಿರುತ್ತದೆ. ಈಗ ತೋರಿಸಿದ ಮಂಜುಳಾಳ ಒಂದು ಜೊತೆ ಚಪ್ಪಲಿಗಳನ್ನು, ಆಕೆಯ ಫೋನನ್ನು ಘಟನಾ ಸ್ಥಳದಲ್ಲಿ ಬಿದ್ದಿದ್ದ ಚಾಪೆಯನ್ನು ಘಟನಾ ಸ್ಥಳದಿಂದ ಪೊಲೀಸರು ಅಮಾನತ್ತುಪಡಿಸಿಕೊಂಡು ಸೀರೆಯ ತುಂಡನ್ನು, ಮತ್ತು ಮಂಜುಳಾಳ 4 ಫೊಟೋ ಮತ್ತು ಶಿವಪ್ಪನ 1 ಫೊಟೋವನ್ನು ನಾನು ಈಗ ನೋಡಿದೆನು ಗುರುತಿಸಿದೆನು. ಅವುಗಳನ್ನು ಈಗಾಗಲೇ ಎಂಓ 1 ರಿಂದ 6 ಎಂದು ಗುರುತಿಸಲಾಗಿದೆ. ಸದರಿ ಮೇಲೆ ಹೇಳಿದ ಹೇಳಿಕೆ ಮತ್ತು ಮರುಹೇಳಿಕೆಯನ್ನು ಕುಷ್ಟಗಿಯ ಪೊಲೀಸರೆದುರು ನೀಡಿದ್ದೇನೆ.

<u>ಪಾಟೀ ಸವಾಲು : 1ನೇ ಆರೋಪಿ ಪರ ವಕೀಲರಿಂದ</u>

ನಾನು ಕೊಪ್ಪಳದ ನ್ಯಾಯಾಲಯಗಳಲ್ಲಿ ಈ ಪ್ರಕರಣವನ್ನು ಬಿಟ್ಟು ಬೇರೆ ಯಾವುದೇ ಪ್ರಕರಣಗಳಲ್ಲಿ ಸಾಕ್ಷಿ ಹೇಳಿಲ್ಲ. ಕುಷ್ಟಗಿಯ ನ್ಯಾಯಾಲಯದ ಒಂದು ಪ್ರಕರಣದಲ್ಲಿ ಮಾತ್ರ ನಾನು ಸಾಕ್ಷಿ ಹೇಳಿದ್ದೇನೆ. ಕನಕಪ್ಪ ಹಳ್ಳದಮಾಳಿ ಯಾವ ಫೋನು ನಂಬರನಿಂದ ನನಗೆ ಫೋನು ಮಾಡಿದನು ಅಂತಾ ಫೋನ ನಂಬರ ಹೇಳಲು ಬರುವುದಿಲ್ಲ, ಅವನ ಫೋನು ನಂಬರ ನನ್ನ ಫೋನಿನಲ್ಲಿ ಇದೆ. ಮಂಜುಳಾಳ ಶವದ ಸುತ್ತಮುತ್ತ ಎಂಓ 1 ರಿಂದ 6 ಇವುಗಳನ್ನು ಹೊರತುಪಡಿಸಿ ಬೇರೆ ಏನೇನು ಸಾಮಾನುಗಳು ಬಿದ್ದಿದ್ದವು ಅಂತಾ ಹೇಳಿದರೆ ಸಾಕ್ಷಿದಾರನು ಅವುಗಳ ಹೊರತು ಬೇರೆ ಯಾವುದೇ ಸಾಮಾನುಗಳು ಅಲ್ಲಿ ಬಿದ್ದಿರಲಿಲ್ಲ ಅಂತಾ ಹೇಳುತ್ತಾನೆ. ಮಂಜುಳಾಳ ಚಪ್ಪಲಿಗಳು ಯಾವ ಕಂಪನಿಯವುಗಳು ಎಂದು ಹೇಳಲು ಬರುವುದಿಲ್ಲ, ಆಕೆಯ ಚಪ್ಪಲಿಗಳು ಕಪ್ಪು ಬಣ್ಣದ ಚಪ್ಪಲಿಗಳಾಗಿರುತ್ತವೆ. ಅಲ್ಲಿ ಶಿವಪ್ಪ ಕೋಡಿಹಾಳದ್ದು ಒಂದು ಫೋಟೋ ಮತ್ತು ಮಂಜುಳಾಳ 4 ಫೊಟೋಗಳು ಅಲ್ಲಿದ್ದವು.

ಮಂಜುಳಾಳ ಸುಟ್ಟ ಶವವು ದಕ್ಷಿಣಕ್ಕೆ ಕಾಲುಗಳಿದ್ದವು, ಉತ್ತರಕ್ಕೆ ತಲೆ ಇತ್ತು. ಆ ಸ್ಥಳದ ಚೆಕ್ಕಬಂದಿ ಹೇಳಲು ಬರುವುದಿಲ್ಲ ಆದರೆ ಅದು ಒಂದು ಗಾಂವಠಾಣಾ ಇತ್ತು. ಎಂಓ 1 ರಿಂದ 6 ಇವುಗಳು ನಾನು ಕೃತ್ಯ ನಡೆದ ಸ್ಥಳದಲ್ಲಿಯೇ ನೋಡಿರುತ್ತೇನೆ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಪೊಲೀಸರು ಪೊಲೀಸ ಠಾಣೆಗೆ 2 ಸಲ ಕರೆಸಿದ್ದರು, ನಾನು ಪೊಲೀಸರ ಕರೆಯ ಮೇರೆಗೆ ದಿಃ 17-3-2016 ರಂದು ಮತ್ತು 19-4-2016 ರಂದು 2 ಸಲ ಹೋಗಿದ್ದೆನು. ದಿಃ 17-3-2016 ರಂದು ಮಂಜುಳಾಳನ್ನು ಸುಟ್ಟಿದ್ದರ ಕುರಿತು ಗೊತ್ತಾಗಿದ್ದರಿಂದ ಕೃತ್ಯ ನಡೆದ ಸ್ಥಳಕ್ಕೆ ಹೋದಾಗ ಅಲ್ಲಿ

ಪೊಲೀಸರು ಇದ್ದರು, ಮತ್ತೊಂದು ಬಾರಿ ದಿಃ 19-4-2016 ರಂದು ಕುಷ್ಟಗಿ ಪೊಲೀಸರು ಕರೆದಾಗ ಹೋಗಿದ್ದೆನು. ದಿಃ 17-3-2016 ರಂದು ಪೊಲೀಸರು ಪಂಚನಾಮೆ ಮಾಡಿದ್ದಾರೆ, ದಿಃ 19-4-2016 ರಂದು ಪೊಲೀಸರು ಪ್ರಕರಣದ ವಿಷಯದ ಕುರಿತು ನನ್ನ ಹೇಳಿಕೆ ತೆಗೆದುಕೊಂಡಿದ್ದಾರೆ. ಸದರಿ ಶವ ಪಂಚನಾಮೆಯಲ್ಲಿ ಏನೇನು ಬರೆದಿದ್ದಾರೆ ಎನ್ನುವುದು ಗೊತ್ತಿಲ್ಲ. ಚಾಪೆ ಮತ್ತು ಫೊಟೋಗಳು, ಫೋನು, ಚಪ್ಪಲಿಗಳು, ಮಂಜುಳಾಳ ಶವದಿಂದ ಯಾವ ಯಾವ ದಿಕ್ಕಿಗೆ ಬಿದ್ದಿದ್ದವು ಅಂತಾ ನನಗೆ ಸುಮಾರು 7 ವರ್ಷಗಳಾಗಿದ್ದರಿಂದ ಹೇಳಲು ನೆನಪಿಲ್ಲ. ಮಂಜುಳಾಳ ಸೀರೆಯು ಕೆಳಗಿನ ಭಾಗದಲ್ಲಿ ಸುಡದೇ ಉಳಿದಿತ್ತು,

ನಾನುಕೃತ್ಯ ನಡೆದ ಸ್ಥಳಕ್ಕೆ ಸಂಗಪ್ಪ, ಕನಕಪ್ಪ, ಶಂಕ್ರಪ್ಪ ಇವರ ಜೊತೆಗೆ ಹೋಗೇಇಲ್ಲ ಎಂದರೆ ಸರಿಯಲ್ಲ, ಅಲ್ಲಿ ಮಂಜುಳಾಳ ಸುಟ್ಟ ಶವವನ್ನು ನೋಡಿಲ್ಲ ಎಂದರೆ ಸರಿಯಲ್ಲ, ಎಂಒ 1 ರಿಂದ 6 ಆ ಸ್ಥಳದಲ್ಲಿ ನೋಡಿಲ್ಲ ಗುರುತಿಸಿಲ್ಲ ಎಂದರೆ ಸರಿಯಲ್ಲ, ಮಂಜುಳಾ ಮತ್ತು ಆಕೆಯ ಗಂಡನ ನಡುವೆ ಮನಸ್ತಾಪವಾಗಿ ಜಗಳಗಳಾಗುತ್ತಿದ್ದವು ಎಂದರೆ ಆಗಿರಬಹುದು, ಆಗುತ್ತಿರಬಹುದು. ಸಂಗಪ್ಪ ಮತ್ತು ಮಂಜುಳಾಳ ಮಧ್ಯ ಜಗಳಗಳಾಗುತ್ತಿದ್ದುದರಿಂದ ಮನಸ್ತಾಪವಾಗಿ ಮನನೊಂದು ಅವಳೇ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದರೆ ಸರಿಯಲ್ಲ. 1ನೇ ಆರೋಪಿ ಗುಂಡಮ್ಮ ನಮ್ಮ ಊರವಳೇ ಎಂದರೆ ನಿಜ. 1 ಮತ್ತು 2ನೇ ಆರೋಪಿತರು ಯಾವುದೇ ತಪ್ಪು ಮಾಡಿಲ್ಲ ಎಂದರೆ ಸರಿಯಲ್ಲ, ಮಂಜುಳಾಳ ಮರಣಕ್ಕೂ ಮತ್ತು ಆರೋಪಿತರಿಗೂ ಯಾವುದೇ ರೀತಿಯ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

<u>ಪಾಟೀ ಸವಾಲು : 2ನೇ ಆರೋಪಿ ಪರ ವಕೀಲರಿಂದ</u>

2ನೇ ಆರೋಪಿ ನಮ್ಮ ಊರಿನವನಲ್ಲ ಮತ್ತು ಜಾತಿಯವನಲ್ಲ ಎಂದರೆ ನಿಜ. 1 ಮತ್ತು 2ನೇ ಆರೋಪಿತರ ಮಧ್ಯ ಯಾವುದೇ ಅನೈತಿಕ ಸಂಬಂಧ ಇಲ್ಲ ಎನ್ನುವುದು ನನಗೆ ಚೆನ್ನಾಗಿ ಗೊತ್ತಿದ್ದರೂ ಕೂಡಾ ಅವರ ವಿರುದ್ದ ಸುಳ್ಳು ಆಪಾದನೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

ಮೇಲಿನ ಪಾಟೀಸವಾಲನ್ನೇ ಅಳವಡಿಸಿಕೊಳ್ಳುವುದಾಗಿ ತಿಳಿಸಿರುತ್ತಾರೆ.

ಮರು ವಿಚಾರಣೆ ಇಲ್ಲ.

(ನನ್ನ ಹೇಳಿಕೆಯ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಉಕ್ತ ಉಲ್ಲೇಖನದಂತೆ ಬೆರಳಚ್ಚು ಮಾಡಲಾಯಿತು) ಓ ಹೇ ಕೇ ಸರಿ ಇದೆ

(ಬನ್ನಿಕಟ್ಟಿ ಹನುಮಂತಪ್ಪ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಪ್ಪಳ